ಈ) ಹಾಗಿದ್ದಲ್ಲಿ ಎಷ್ಟು ಪದವೀಧರರನ್ನು ನಿಯೋಜಿಸಿಕೊಳ್ಳಲಾಗಿದೆ?

ಶ್ರೀ ಸಿ. ಬೈರೇಗೌಡ (ಕೃಷಿ ಸಚಿವರು):-

ಅ) ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದ ಕೃಷಿ ಮಹಾವಿದ್ಯಾಲಯಲ್ಲಿ ಕೃಷಿ ಮಾರಾಟ ಮತ್ತು ಸಹಕಾರದಲ್ಲಿ ಪದವಿಯ ವ್ಯಾಸಂಗ 1976ರಲ್ಲಿ ಪ್ರಾರಂಭವಾಯಿತು. ಆದರೆ ಕೃಷಿ ಮಹಾವಿದ್ಯಾಲಯ, ಧಾರವಾಡದಲ್ಲಿ 1986ರಲ್ಲಿ ಪ್ರಾರಂಭವಾಯಿತು.

ಆ) ಕೃಷಿ ವಿಶ್ವವಿದ್ಯಾನಿಲಯ ಬೆಂಗಳೂರಿನಲ್ಲಿ 345 ಜನ ಮತ್ತು ಧಾರವಾಡದಲ್ಲಿ 131 ಜನ ಪದವಿ ಪಡೆದುಕೊಂಡಿದ್ದಾರೆ.

ಇ) ಸರ್ಕಾರದ ನೀತಿ ಮೇರೆಗೆ ಸಹಕಾರ ಇಲಾಖೆಯಲ್ಲಿಯ ಸಹಕಾರ ಸಂಘಗಳ ನಿರೀಕ್ಷಕರ ಹುದ್ದೆಗೆ ನೇಮಕಾತಿಯಲ್ಲಿ ಆದ್ಯತೆ ನೀಡಲು ವ್ಯಂದ ಮತ್ತು ನೇಮಕಾತಿ ನಿಯಮಗಳಲ್ಲಿ ಅವಕಾಶ ಮಾಡಲಾಗಿದೆ.

ಈ) ಇವತ್ತಿನವರೆಗೂ ಸದರಿ ಹುದ್ದೆಗೆ ನೇಮಕಾತಿ ಆಗಿರುವುದಿಲ್ಲ.

ವಿಷಯ:- ಗದಗ್‌ನಲ್ಲಿ ಕೆ.ಎಸ್.ಆರ್.ಟಿ.ಸಿ. ವಿಭಾಗೀಯ ಕಾರ್ಯಗಾರ

1138 (1127) **ಶ್ರೀ ಡಿ.ಆರ್. ಪಾಟೀಲ್ (ಗದಗ್):-** ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಗದಗದಲ್ಲಿ ಸುಸಜ್ಜಿತ ವಿಭಾಗೀಯ ಕಾರ್ಯಾಗಾರ (ವರ್ಕ್‌ಷಾಪ್) ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ? ಹಾಗಿದ್ದಲ್ಲಿ ಯಾವಾಗ ವರ್ಕ್‌ಷಾಪ್ ಪ್ರಾರಂಭಿಸಲಾಗುವುದು?

ಶ್ರೀ ಪಿ.ಜಿ.ಆರ್. ಸಿಂಧ್ಯ (ಸಾರಿಗೆ ಸಚಿವರು):-

ಅ) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಗೆ ಗದಗಿನಲ್ಲಿ ಹೊಸ ವಿಭಾಗೀಯ ಕಾರ್ಯಾಗಾರ ಮತ್ತು ಆಧುನಿಕ ಬಸ್ ನಿಲ್ದಾಣವನ್ನು ನಿರ್ಮಿಸಲು ಸೂಕ್ತವಾದ 15 ಎಕರೆ ನಿವೇಶನವನ್ನು ಒದಗಿಸಲು ನಗರ ಸಭೆಯವರನ್ನು ಕೋರಲಾಗಿದೆ. ನಿವೇಶನವನ್ನು ಒದಗಿಸಿದ ಕೂಡಲೇ ನಿರ್ಮಾಣ ಕಾರ್ಯವನ್ನು ಕೈಗೆತ್ತಿಕೊಳ್ಳಲಾಗುವುದು.

ವಿಷಯ:- ಗದಗ್‌ನ ಕೆ.ಎಸ್.ಆರ್.ಟಿ.ಸಿ. ವಿಭಾಗೀಯ ಕಛೇರಿಗೆ ನೂತನ ಕಟ್ಟಡ

1139 (1127-ಎ) **ಶ್ರೀ ಡಿ.ಆರ್. ಪಾಟೀಲ್ (ಗದಗ್):-** ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಗದಗದಲ್ಲಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ನಿಗಮದ ವಿಭಾಗೀಯ ಕಛೇರಿ ಪ್ರಾರಂಭವಾಗಿ 5 ವರ್ಷಗಳಾಗುತ್ತಾ ಬಂದಿದ್ದರೂ ಈ ಕಛೇರಿಗೆ ಸ್ವಂತ ಕಟ್ಟಡ ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?